# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **409** |
| **ಸದಸ್ಯರ ಹೆಸರು** | : | **ಡಾ:ತಳವಾರ್ ಸಾಬಣ್ಣ** (ನಾಮ ನಿರ್ದೇಶನ ಹೊಂದಿದವರು) |
| **ಉತ್ತರಿಸುವ ದಿನಾಂಕ** | : | **15.09.2022** |
| **ಉತ್ತರಿಸುವ ಸಚಿವರು** | : | **ಮಾನ್ಯ ಜಲಸಂಪನ್ಮೂಲ ಸಚಿವರು** |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯ ಕೆ.ಎನ್.ಎನ್.ಎಲ್. ಅಡಿಯಲ್ಲಿ ಬರುವ ಮುಖ್ಯ ಕಾಲುವೆಗಳಲ್ಲಿ ಸಮರ್ಪಕವಾಗಿ ನೀರು ಹರಿಯದೇ ಸೋರಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಲಬುರಗಿ ಜಿಲ್ಲೆಗೆ ಸಂಬಂಧಿಸಿದಂತೆ ಕರ್ನಾಟಕ ನೀರಾವರಿ ನಿಗಮದಡಿಯಲ್ಲಿ ಒಟ್ಟು 06 ಯೋಜನೆಗಳು (ಕೆಳದಂಡೆ ಮುಲ್ಲಾಮಾರಿ, ಗಂಡೋರಿನಾಲಾ, ಭೀಮಾ, ಚಂದ್ರಂಪಳ್ಳಿ, ಅಮರ್ಜಾ ಮತ್ತು ಬೆಣ್ಣೆತೋರಾ) ಇರುತ್ತವೆ.<br><br>ಸದರಿ ಯೋಜನೆಗಳಲ್ಲಿ ಬೆಣ್ಣೆತೋರಾ ಯೋಜನೆ, ಕೆಳದಂಡೆ ಮುಲ್ಲಾಮಾರಿ ಯೋಜನೆ, ಗಂಡೋರಿನಾಲಾ ಯೋಜನೆಗಳ ಕಾಲುವೆ ಜಾಲಗಳ ಆಧುನೀಕರಣ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪೂರ್ಣಗೊಂಡ ನಂತರ ಮುಖ್ಯ ಕಾಲುವೆಗಳಲ್ಲಿ ಸಮರ್ಪಕವಾಗಿ ನೀರು ಹರಿಸಲಾಗುವುದು.<br><br>ಚಂದ್ರಂಪಳ್ಳಿ ಯೋಜನೆಯು 46 ವರ್ಷಗಳಷ್ಟು ಹಳೆಯ ಯೋಜನೆಯಾಗಿದ್ದು, ಈ ಯೋಜನೆಯ ಕಾಲುವೆಗಳಲ್ಲಿ ಸಮರ್ಪಕವಾಗಿ ನೀರು ಹರಿಸಲು ವಾರ್ಷಿಕ ನಿರ್ವಹಣೆಗಾಗಿ ನೀಡುವ ಅನುದಾನದಲ್ಲಿ ಕಾಲುವೆಗಳ ನಿರ್ವಹಣಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.<br><br>ಅಮರ್ಜಾ ಯೋಜನೆ ಹಾಗೂ ಭೀಮಾ ಏತ ನೀರಾವರಿ ಯೋಜನೆಗಳ ಕಾಲುವೆ ಜಾಲಗಳಲ್ಲಿ ನೀರನ್ನು ಸಮರ್ಪಕವಾಗಿ ಹರಿಸಲಾಗುತ್ತಿದ್ದು ಯಾವುದೇ ರೀತಿಯ ಸೋರಿಕೆಯಾಗುತ್ತಿರುವುದು ಕಂಡು ಬಂದಿರುವುದಿಲ್ಲ. |
| ಆ) | ಮುಖ್ಯ ಕಾಲುವೆಗಳಲ್ಲಿ ಮಣ್ಣು, ಕಡ್ಡಿಕಸ, ಹಾಳಾದ ಕಾಂಕ್ರೀಟ್ ದುರಸ್ಥಿ ಕೈಗೊಳ್ಳದ ಕಾರಣಗಳಿಂದ ಕಾಲುವೆಗಳು ಸಮರ್ಪಕ ನಿರ್ವಹಣೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಣ್ಣೆತೋರಾ ಯೋಜನೆ, ಕೆಳದಂಡೆ ಮುಲ್ಲಾಮಾರಿ ಯೋಜನೆ, ಗಂಡೋರಿನಾಲಾ ಯೋಜನೆಗಳ ಕಾಲುವೆ ಜಾಲಗಳ ಆಧುನೀಕರಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಕಾಲುವೆಗಳಲ್ಲಿಯ ಮಣ್ಣು, ಜಂಗಲ್ ತೆಗೆಯುವುದು ಹಾಗೂ ಹಾಳಾದ ಕಾಂಕ್ರೀಟ್ ದುರಸ್ಥಿ ಕಾಮಗಾರಿಯನ್ನು ಕಾಲುವೆ ಆಧುನೀಕರಣದಡಿ ಕೈಗೊಳ್ಳಲಾಗುತ್ತಿದೆ. ಚಂದ್ರಂಪಳ್ಳಿ ಯೋಜನೆ, ಅರ್ಮಜಾ ಯೋಜನೆ, ಭೀಮಾ ಏತ ನೀರಾವರಿ ಯೋಜನೆಗಳ ಕಾಲುವೆ ಜಾಲದಲ್ಲಿಯ ಮಣ್ಣು, ಜಂಗಲ್ ತೆಗೆಯುವುದು ಹಾಗೂ ಹಾಳಾದ ಕಾಂಕ್ರೀಟ್ ದುರಸ್ಥಿ ಕಾಮಗಾರಿಯನ್ನು ವಾರ್ಷಿಕ ನಿರ್ವಹಣೆ ಅಡಿಯಲ್ಲಿ ಕೈಗೊಂಡು, ರೈತರ ಬೇಡಿಕೆಗೆ ಅನುಗುಣವಾಗಿ ಕಾಲುವೆಗೆ ನೀರು ಹರಿಸಲಾಗುತ್ತಿದೆ. |
| 3) | ಕಲಬುರಗಿ ಜಿಲ್ಲೆಗೆ ಅಲ್ಪ-ಸ್ವಲ್ಪ ಮಳೆ ಬಂದರೂ ಅಚ್ಚು- ಕಟ್ಟು ಪ್ರದೇಶದ ರೈತರಿಗೆ ನೀರು ತಲುಪುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| 4) | ಕಲಬುರಗಿ ಜಿಲ್ಲೆಯಲ್ಲಿರುವ ಜಲಸಂಪನ್ಮೂಲ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದ ಕಾರಣದಿಂದ ಅಚ್ಚು-ಕಟ್ಟು ಪ್ರದೇಶದ ರೈತರಿಗೆ ನೀರನ್ನು ಒದಗಿಸಲು ಸಾಧ್ಯವಾಗದ ಕಾರಣ ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ? | |

**ಸಂಖ್ಯೆ: ಜಸಂಇ 144 ಎಂಎಲ್ಎ 2022**

(ಗೋವಿಂದ ಎಂ.ಕಾರಜೋಳ)
ಜಲಸಂಪನ್ಮೂಲ ಸಚಿವರು